# 6

# ದೇವರಿಂದ ಸಂತೈಸುವಿಕೆಯನ್ನು ಹೊಂದುವದು

## (2 ಕೊರಿಂಥ 1:3-11; 7:5-16)

*“ಆದರೆ ... ದೇವರು ತೀತನ ಬರುವಿಕೆಯಿಂದ ನಮ್ಮನ್ನು ಸಂತೈಸಿದನು” (7:6).*

ಬೈಬಲ್ಲಿನದ್ದಕ್ಕೂ ಇರುವ ಒಂದು ಶ್ರೇಷ್ಟ ಸಂಗತಿಯೆಂದರೆ ಸುವಾರ್ತೆಯು ಜೀವನದ ಹೊರೆಯಿಂದ ನಮ್ಮನ್ನು ಬಿಡುಗಡೆಮಾಡಲು ಯೇಸು ಕರೆಕೊಟ್ಟದ್ದೇ ಆಗಿದೆ. ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಕಂಡುಕೊಳ್ಳಬಹುದಾದ ಯಾರೊಬ್ಬರೂ ನ್ಯಾಯಯುತವಾಗಿ ಹೊತ್ತು ಕೊಳ್ಳಲಾಗದಂತಹ ಯಾರೋಬ್ಬರೂ ಇಟ್ಟುಕೊಳ್ಳಲು ಬಯಸದಂತಹ “ಹೊರೆಯನ್ನು ಹೊತ್ತ” (ಹೋಲಿಸಿ ಮತ್ತಾಯ 23:4) ರಾಗಿರು ತ್ತಾರೋ ಅವರಿಗೆ “ನಿಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಕೊಡುವೆನು” ಎಂಬ ಸಂದೇಶವು ಪ್ರಧ್ವನಿತವಾಗಿರುವದು ಕಂಡು ಬರುತ್ತದೆ (ಹೋಲಿಸಿ ಮತ್ತಾಯ 11:28-30). ಇತರರು ದಾಸತ್ವದ ಅಡಿಯಲ್ಲಿ ಪ್ರೇರೇಪಿತರಾಗಿ ಹತ್ತಿಕ್ಕಲ್ಪಟ್ಟರಾಗಿರುತ್ತಾರೆ, ಆದರೆ ಕ್ರೈಸ್ತರು ಆತನ ದುಷ್ಟತನದ ಸಹಜ ಪ್ರವೃತ್ತಿಯಿಂದ ಬಿಡುಗಡೆಮಾಡಲ್ಪಟ್ಟವರಾಗಿದ್ದಾರೆ. ಈ ಹೊರೆಯನ್ನು ತೆಗೆದುಹಾಕುವದು ಕ್ರೈಸ್ತತ್ವದ ಸುವಾರ್ತೆಯಾಗಿದೆ.

ಕಥೆಯ ಇನ್ನೊಂದು ಬದಿ, ಹಲವು ಬಾರಿ ಕ್ರೈಸ್ತರಿಗೆ ಆಶ್ಚರ್ಯಕರವಾಗಿ ಕಂಡುಬರುತ್ತಾರೆ. ಕ್ರಿಯಾಶೀಲ ಶಿಷ್ಯತ್ವವು ಅತೀ ಹೆಚ್ಚಾಗಿ ಹೊರೆಯುಕ್ತವಾಗಿದೆ. ನನಗೆ ನೆನಪಿರುವಂತೆ ಸಭಾ ಜೀವಿತದ ಅನೇಕ ಹೊರೆಗಳು ಚರ್ಚಿಸಲ್ಪಡುತ್ತಿರುವಾಗ ನಾನು ಅಲ್ಲಿದ್ದುದನ್ನು ನೆನಪಿಸಿಕೊಳ್ಳುತ್ತಾ ಇದ್ದೆನು. ಒಂದು ಉದ್ರಿಕ್ತವಾದ ಸಮಯವು ಇನ್ನೊಂದಕ್ಕೆ ನಡೆಸಲ್ಪಡುತ್ತಿತ್ತು. ಅನೇಕ ಅಂಥ ಕ್ಷಣಗಳು ನಿರಾಶೆಯ ಪರಿಣಾಮದ ಫಲಿತಾಂಶವಾಗಿ ರುತ್ತಿದ್ದವು. ಇನ್ನೊಂದು ಉದಾಹರಣೆಯಲ್ಲಿ, ಬೋಧಿಸುವುದರಲ್ಲಿ ಹೊರೆಯಲ್ಲಿ ತಮ್ಮನ್ನು ಒಪ್ಪಿಸಿಕೊಂಡವರಲ್ಲಿ ಯಾವ ವೃದ್ಧಿಯನ್ನು ಕಾಣದಿರುವದೂ ಆಗಿದೆ. ಅನೇಕ ಕ್ರಿಯಾಶಾಲ ಕ್ರೈಸ್ತರು ತಮ್ಮ ಮೇಲೆ ಇರುವ ಅತೀಯಾದ ಭಾರದಿಂದ ಹತ್ತಿಕ್ಕಲ್ಪಡುತ್ತಿರುವುದಕ್ಕಾಗಿ ನಿರಾಶೆ ಯನ್ನು ಮತ್ತು ಕಳವಳವನ್ನು ವ್ಯಕ್ತಪಡಿಸುವದರ ಬಗೆಗೆ ನಾನು ಮಾತನಾಡುತ್ತಿದ್ದೇನೆ.

ಗ್ರೀಕರು ಬಳಸುವ ಜಗತ್ತಿನ ಚಿತ್ರವನ್ನು ಹಿಡಿದಿರುವಂತೆ ನಾವೂ ಸಹ ಚರ್ಚನ್ನು ನಮ್ಮ ಮೇಲೆ ನಾವು ಹೊತ್ತುಕೊಂಡಿರುವ ಹಾಗೆ ಹಲವು ಬಾರಿ ಭಾರವನ್ನು ನಾವು ಉತ್ಪ್ರೇಕ್ಷಿ ಸುವವರಾಗಿರುತ್ತೇವೆ. ನಾವು ಎಂದಿಗೂ ಒಂಟಿಯಾಗಿ ಚರ್ಚನ್ನು ಹಿಡಿಕೊಳ್ಳಬಹುದು ಎಂದು ಕೊಂಡಿದ್ದಾದರೂ ಹಾಗೆ ಮಾಡಲಾರೆವು. ಆದರೆ ಚರ್ಚಿನ ಜೀವಿತವು ಅತಿಯಾದ ಭಾರವನ್ನು ಒಳಗೊಂಡಿರುತ್ತದೆ. ಹೆಚ್ಚಾಗಿ ವ್ಯರ್ಥಗೊಳಿಸುವ ಸಂಗತಿಗಳು ಯಾವುದೇ ಬಿಡುಗಡೆಯಿಲ್ಲದ್ದನ್ನು ತೋರುವವುಗಳಾಗಿವೆ. ಸಮಸ್ಯೆಗಳು ಪ್ರತಿಯೊಂದೆಡೆಯಿಂದಲೂ, ಯಾವುದೇ ಮುನ್ನೆಚ್ಚರಿಕೆಯಿಲ್ಲದೇ ಬರುವುದಾಗಿದೆ. ಅವುಗಳು ಅಭಿಪ್ರಾಯಗಳ ಮೇಲೆ ಉಂಟಾಗುವ ವ್ಯತ್ಯಾಸಗಳ ನಿಮಿತ್ತ ಉದ್ಭವಿಸುವ ಒತ್ತಡಗಳನ್ನು ಒಳಗೊಂಡಿರಬಹುದು. ಆತ್ಮೀಯ ಮಿತ್ರರ ವೈಯಕ್ತಿಕ ಸಮಸ್ಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಕೂಡ ಅವುಗಳು ಒಳಗೊಳ್ಳಬಹುದು. ನಾವು ಸರಳವಾಗಿ ಹೊರಬಲಾರೆವು ಎಂಬ ಅನುಭವವುಗಳು

ನಮ್ಮನ್ನು ನಿಸ್ತೇಜ ಮಾಡಬಹುದು ಹೀಗೆ ಚರ್ಚಿನ ಜೀವಿತದ ಹೊರೆಗಳು ಹಲವು ಬಾರಿ ಹೆಚ್ಚು ಕೊಳ್ಳುತ್ತವೆ ಯಾಕಂದರೆ ನಾವು ಕಂಡಂತೆ ನಮ್ಮ ಹೋರಾಟಕ್ಕೆ ಯಾವುದೇ ಕೊನೆಯು ಇರುವುದಿಲ್ಲ ಮತ್ತು ನಮ್ಮ ಸೇವೆಯಿಂದ ನಮಗೆ ಯಾವುದೇ ನಿವೃತ್ತಿಯೂ ಇರುವುದಿಲ್ಲ ಎಂಬುದೇ. ಕ್ರಿಸ್ತೀಯ ಜೀವಿತವು ಹೊರೆಯಿಂದ ಬಿಡುಗಡೆಮಾಡುವದು ಎಂದು ಎದುರು ನೋಡುವವರಿಗೆ ಇದು ಹಲವು ಬಾರಿ ಭ್ರಮನಿರಸನವನ್ನು ಉಂಟುಮಾಡುತ್ತದೆ.

2ನೇ ಕೊರಿಂಥ ಪತ್ರಿಕೆಯ ಪ್ರಕಾರ, ನಿಜ ಶಿಷ್ಯನು ಸೇವೆಯ ಆಶಾಭಂಗದಿಂದ ಭ್ರಮನಿರಸನಾಗಲಾರನು ಎಂದಿದೆ. ಈ ಹೊರೆಗಳು ಕ್ರಿಸ್ತನ ಸೇವಕನ ಸಂಪೂರ್ಣ "ಕಾರ್ಯದ ಉಲ್ಲೇಖದ" ಭಾಗವನ್ನು ಆತನು ಅರ್ಥೈಸಿಕೊಳ್ಳುತ್ತಾನೆ. ಪೌಲನು ತಾನು "ಕ್ರಿಸ್ತನವನು" (10:7), ಅಥವಾ "ಕ್ರೈಸ್ತನು" ಎಂಬ ಸವಾಲನ್ನು ಸಾಧಿಸುವಾಗ ಆತನು ತನ್ನ ಕೂಲಿಯ ಬಗೆಗೆ ಹೇಳುತ್ತಾನೆ. ಆತನು ತನ್ನ ಆತ್ಮಕ್ಕೆ "ಉಪಶಮನವಿಲ್ಲ" ಎಂದು ವ್ಯಕ್ತಪಡಿಸುವವನಾಗಿದ್ದಾನೆ (2:13); ತೊಂದರೆದಾಯಕ ಸಭೆಯು ನಿದ್ರೆಯಿಲ್ಲದ ರಾತ್ರಿಗಳನ್ನು ಕೊಟ್ಟವು. ಈ ದುಃಖವು ತಿರುಗಿಬಿದ್ದ ಜನರಿಂದ ಬಂದುದಾಗಿದೆ ಎಂದು ಆತನು ವ್ಯಕ್ತಪಡಿಸುವವನಾಗಿದ್ದಾನೆ (2:1-4). ಇದಕ್ಕೆ ಜೊತೆಯಾಗಿ, ಅಸ್ವಸ್ಥತೆಯ (12:7), ಬಳಲಿಕೆಯ ಮತ್ತು ಹಿಂಸೆಯ ನಿರಂತರವಾಗುವಿಕೆಯ ಸಮಸ್ಯೆಯನ್ನೂ ಆತನು ಅನುಭವಿಸಿದನು. ಒಂದು ನಿರ್ಧಿಷ್ಟವಾದ, ಸ್ಫುಟವಾದ ಹೇಳಿಕೆಯಲ್ಲಿ "ಬಲವನ್ನು ಮೀರಿದಂಥ ಅತ್ಯಧಿಕವಾದ ಭಾರದಿಂದ ಕುಗ್ಗಿಹೋಗಿದ್ದೇವೆ" ಮತ್ತು "ಜೀವದಿಂದ ಉಳಿಯುವ ಮಾರ್ಗವು ಕಾಣದವರಾದೆವು" ಎಂದು ಹೇಳುವಲ್ಲಿ ಅದು ಹಿಂಸೆಯು ಬಲು ಗಂಭೀರವಾದದ್ದು ಎಂದು ಹೇಳುತ್ತಾನೆ (1:8). ಈ ಭಾರವು ಆತನನ್ನು ಪುಡಿಮಾಡುವಂತೆ ಇತ್ತು. ಪೌಲನ ಸೇವೆಯು ಭಾರವನ್ನು ಬಿಟ್ಟರೆ ಮತ್ತೇನನ್ನೂ ತರಲಿಲ್ಲ. ಈ ದೃಷ್ಯದಲ್ಲಿ ಹೋರಾಟಕ್ಕೆ ಅಂತ್ಯವಿಲ್ಲದ್ದು ಕಂಡುಬರುವುದಾಗಿದೆ.

2ನೇಯ ಕೊರಿಂಥದ ಎರಡನೇ ಭಾಗದ ಆರಂಭವು (1:3-11) ಈ ವಿಷಯದಿಂದ ತುಂಬಿದೆ. ಪೌಲನು ಪುಸ್ತಕದ ಮುಖ್ಯ ವಿಷಯದ ಆಧಾರಗಳನ್ನು ಒಳಗೊಂಡಂಥ ವಂದನಾರ್ಪಣೆಯ ಜೊತೆಯಲ್ಲಿನ ತನ್ನ ಪತ್ರಗಳನ್ನು ಸಾಂಪ್ರದಾಯಿಕವಾಗಿ ತೆರೆದನು (ಹೋಲಿಸಿ ರೋಮಾಪುರ 1:8-17; 1 ಕೊರಿಂಥ 1:4). 2ನೇ ಕೊರಿಂಥದ "ವಂದನಾರ್ಪಣೆ"ಯ ಭಾಗವು ಸಂಕಟವು ಸೂಚಿಸುವುದಾಗಿದ್ದು, ಈ ವಿಷಯವು ಪುಸ್ತಕದುದ್ದಕ್ಕೂ ಮಂದುವರೆದದ್ದಾಗಿದೆ (1:4, 6, 8; 2:4; 4:17; 6:4; 7:4; 8:2, 13). ಕ್ರೈಸ್ತರ ಕಷ್ಟಪಡುವಿಕೆಯ ಪ್ರಸ್ತಾವನೆಯು ಸಹ ಮಾಡಲ್ಪಟ್ಟಿದೆ (1:5, 6). ತನಗೆ "ಮರಣವಾಗುತ್ತದೆಂಬುದು" ಆತನನ್ನು ತಲುಪಿದಾಗ ಅದಕ್ಕೆ ಜೊತೆಯಾಗಿ, ಆತನು ಸಮಯವನ್ನು ಸೂಚಿಸಿದನು (1:9). ಈ ಘಟನೆಯ ಬಗೆಗೆ ನನಗೆ ವಿವರವಿಲ್ಲ, ಪೌಲನಿಗೋಸ್ಕರ ಕ್ರಿಸ್ತನ ಸೇವಕರಾಗಿರುವುದರಲ್ಲಿ ಹೊರೆಗಳು ಒಳಗೊಂಡಿವೆ ಎಂಬುದನ್ನು ಕೇವಲ ನಮಗೆ ಯಾವುದೇ ವಿವರವಿಲ್ಲ, ಪೌಲನಿಗೋಸ್ಕರ ಕ್ರಿಸ್ತನ ಸೇವಕರಾಗಿರುವುದರಲ್ಲಿ ಹೊರೆಗಳು ಒಳಗೊಂಡಿವೆ ಎಂಬುದನ್ನು ಕೇವಲ ನಮಗೆ ನೆನಪಿಸುವುದಕ್ಕೋಸ್ಕರ ಇದನ್ನು ಇಲ್ಲಿ ಸೇರಿಸಲಾಗಿದೆ. ಕ್ರಿಸ್ತೀಯ ಜೀವಿತ ಅನೇಕ ಹೊರೆಗಳತ್ತ ನಮ್ಮ ಲಕ್ಷವನ್ನು ಸೆಳೆಯುವುದರ ಮೂಲಕ ಆತನು ಪತ್ರಿಕೆಗಳಲ್ಲಿ ಧ್ವನಿಯನ್ನು ಇರಿಸಿದನು.

ಕ್ರಿಸ್ತನ ಸೇವೆಯು ಯಾಕೆ ತುಳುತಕ್ಕೆ "ಒಳಗಾಗಬೇಕು"? 1:5ರಲ್ಲಿ, ತನ್ನ ಓದುಗರು ಅರಿತು ಕೊಳ್ಳುವರು ಎಂದು ಪೌಲನು ಇಲ್ಲಿ ಭಾವಿಸಿದ್ದು ಕಂಡುಬರುತ್ತದೆ. "ಕ್ರಿಸ್ತನ ನಿಮಿತ್ತ ನಮಗೆ ಬಾಧೆಗಳು ... ಹೇರಳವಾಗಿ ಉಂಟಾಗುತ್ತವೆ" ಎಂಬುವದು ಕ್ರಿಸ್ತೀಯ ಜೀವಿತದ ಅಮೂಲ್ಯವಾದ ಸತ್ಯಾಂಶವನ್ನು ಸೂಚಿಸುವುದಾಗಿದೆ: "ಕ್ರಿಸ್ತನ ಬಾಧೆಯ ಬಟ್ಟಲು ತುಂಬಿಹೊರಸೂಸಿದೆ, ಮತ್ತು ನಾವೂ ಆತನೊಡನೆ ಬಾಧೆಪಡುವೆವು ..." ಎಂದು ಈ ವಚನವನ್ನು ಯೋಗ್ಯವಾಗಿ ಭಾಷಾಂತರಿಸಿದೆ. "ಕ್ರಿಸ್ತನ ಬಾಧೆಗಳ" ಶಿಲುಬೆಯಲ್ಲಿ ಕೊನೆಯಾಲ್ಲಿ. ಅವುಗಳು ಆತನ ಜನರ ಜೀವಿತದೊಡನೆ ವಿಸ್ತರಿಸಲ್ಪಟ್ಟಿವೆ. ಯೇಸು

ಒಂದು ಸಾರಿ ತನ್ನ ಶಿಷ್ಯರಿಗೆ ತನ್ನನ್ನು ಹಿಂಬಾಲಿಸುವಂತೆ ಹೇಳುವ ನಿಟ್ಟಿನಲ್ಲಿ ಅವರಿಗೆ "ಕ್ರೂಜೆಯನ್ನು ಹೊತ್ತುಕೊಳ್ಳಬೇಕು" ಎಂದು ಹೇಳಿದನು (ಮಾರ್ಕ 8:34). ಅನೇಕ ಸಂದರ್ಭಗಳಲ್ಲಿ ಪೌಲನು ಕ್ರಿಸ್ತನ ಬಾಧೆಗಳಲ್ಲಿನ "ಅನ್ಯೋನ್ಯತೆಯ" (ಅಥವಾ ಪಾಲುಗಾರಿಕೆ) ಪಾರಿಭಾಷಿಕವನ್ನು ಸ್ಪುಟವಾಗಿ ಮಾನಾಡುತ್ತಾನೆ (ಫಿಲಿಪ್ಪಿ 3:10). ಗಲಾತ್ಯದವರಿಗೆ, ಆತನು ಬರೆಯುತ್ತಾ "... ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ" (ಗಲಾತ್ಯ 6:17) ಎಂದು ಹೇಳುತ್ತಾನೆ. ಆತನು ಕೊಲಸ್ಸೆದವರಿಗೆ, "... ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ... ತೀರಿಸುತ್ತೇನೆ" (ಕೊಲಸ್ಸೆ 1:24) ಎಂದು ಬರೆಯುತ್ತಾನೆ. ಕ್ರಿಸ್ತನ ಸೇವೆಯು ಹೊರೆಯುಕ್ತವಾಗಿದೆ, ಆದ್ದರಿಂದ ಕ್ರೈಸ್ತನ ಸಂಕಟಗಳು ಸಭೆಯಲ್ಲಿ ಮುಂದುವರೆದಿವೆ. ನಾವು ಇತರರ ಬಾಧೆಗಳಿಂದ ಹೊರಹೊತತವರಾಗಿದ್ದರೆ, ಕ್ರಿಸ್ತನು ಪ್ರಾರಂಭಿಸಿದಂಥ ಸಂಕಟಗಳಲ್ಲಿ ಪಾಲು ತೆಗೆದುಕೊಳ್ಳುವವರಾಗಿರುತ್ತೇವೆ.

ಸಭೆಯ ಜೀವಿತದ ಹೊರೆಯ ಭ್ರಮನಿರಸನವನ್ನು ಕಂಡ ನಾವುಗಳು ಕ್ರಿಸ್ತನಿಗಾಗಿನ ಪೌಲನ ವೇದನೆಯ ಒಪ್ಪಿಕೊಳ್ಳುವಿಕೆಯಲ್ಲಿ ಆರೋಗ್ಯಕರ ವಾಸ್ತವಿಕತೆಯನ್ನು ಕಂಡುಕೊಳ್ಳುವವರಾಗಿದ್ದೇವೆ ಆತನ ಹೊರೆಯ ಕಾರ್ಯಗಳು ಕ್ರಿಸ್ತೀಯ ಜೀವಿತದ ಪರಮಸುಖದ ಅಡ್ಡಿಪಡಿಸುವಿಕೆಯ ದುರ್ದೈವದಂತೆ ಎಂದಿಗೂ ವಣಿವತವಾಗಿಲ್ಲ. "ಎಲ್ಲಾ ಸಭೆಗಳ ವಿಷಯವಾದ ಚಿಂತೆಯು" (11:28) ದುರ್ಬರವಾದ ಬಾರವು ಕ್ರಿಸ್ತೀಯ ಜೀವಿತದ ಪ್ರಾಸದ ಭಾರವನ್ನು ಹೊಂದಿದೆ. ಈ ವಾಸ್ತವವು ನಮಗೆ ಕೇಳುವುದಕ್ಕೆ ಕಾರಣವಾಗಿದೆ. ಕ್ರಿಸ್ತೀಯ ಜೀವಿತದ ಬಗೆಗಿನ ಸುವಾರ್ತೆಯು ಎಲ್ಲಿದೆ?

## ಸಂತೈಸುವಿಕೆಯ ದೇವರು (1:3)

ಕ್ರಿಸ್ತೀಯ ಜೀವಿತದ ಸಂಕಟ ಮತ್ತು ಹೊರೆಯು ಪೌಲನ ಉಲ್ಲೇಖದ ಗುರುತರದ ಅಂಶವು 1:3-11ರಲ್ಲಿನ ನಿರಾಶೆಯ ಕ್ಷಣಗಳನ್ನು ಉಪಕಾರಸ್ಮರಣೆಯ ಸಂದರ್ಭದಲ್ಲಿ ನೆನಪಿಸುಕೊಳ್ಳುತ್ತಾನೆ! ಕ್ರೈಸ್ತತ್ವಯು ಹೊರೆಯುಕ್ತವಾದುದ್ದು ಎಂಬುದನ್ನು ನಮಗೆ ತಿಳಿಸಲು ಈ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತಿಲ್ಲ. ಅಂತೆಯೇ ಆತನು "ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರವಾಗಲಿ; ಆತನು ಕನಿಕರವುಳ್ಳ ತಂದೆಯೂ ಸಕಲವಿಧವಾಗಿ ಸಂತೈಸವ ದೇವರೂ ಆಗಿದ್ದಾನೆ" ಎಂಬ ಭಾಗದೊಂದನೆ ಪದಗಳ ಪರಿಚ್ಛೇದದೊಂದಿಗೆ ಹೀಗೆ ಪ್ರಾರಂಭಿಸುತ್ತಾನೆ. ಇದು ದೇವರ ಶಕ್ತಿಯ ಮತ್ತು ಕರುಣೆಯ ಒತ್ತಿಹೇಳುವಿಕೆಯಾಗಿದೆ. "ದೇವರಿಗೆ ಸ್ತೋತ್ರವಾಗಲಿ" ಎಂಬುದು ಹೊಸ ಒಡಂಬಡಿಕೆಯಲ್ಲಿ ಪ್ರಾರಂಭದ ಅಕ್ಷರವಾಗಿ ಇನ್ನೂ ಎರಡು ಉದಾಹರಣೆಗಳಲ್ಲಿ ಬಳಸಲ್ಪಟ್ಟಿದೆ (ಎಫೆಸ 1:3; 1 ಪೇತ್ರ 1:3). ದೇವರಿಗೆ ವಂದನೆಗಳನ್ನು ತಿಳಿಸುವದು ಸಾಂಪ್ರದಾಯಕ ಯೆಹೂದಿ ಮಾರ್ಗವಾಗಿದೆ (ಹೋಶಿಯ 11:31; ಲೂಕ 1:68; ರೋಮಾಪುರ 1:25; 9:5). "... ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ" (ಯೋಬ 1:21), ಯೋಬನು ನೋವನ್ನು ಈ ಮಾತುಗಳೊಡನೆ ಪ್ರತಿಕ್ರಯಿಸಿದಂತೆ, ಪೌಲನು ತನ್ನ ಹೊರೆಯ ಖಾತೆಯನ್ನು ಉಪಕಾರಸ್ಮರಣೆಯ ಮಾತುಗಳ ಮೂಲಕ ತೆರೆದನು.

ಪೌಲನು ಆತನನ್ನು ತಂದ ಆತನ ನಂಬಿಕೆಯ ಹೊರೆಯನ್ನು ಸಹಿಸಲು ಹೇಗೆ ಸಮರ್ಥನಾಗಿದ್ದಾನೆ ಎಂದು ನಾವು ಆಶ್ಚರ್ಯಪಡಬಹುದು, ಇದಕ್ಕೆ ಉತ್ತರವು "ಸಂತೈಸುವ ದೇವರೂ" ಆಗಿರುವಂತ ಆತನ ದೇವರ ದೃಷ್ಟಿಸುವಿಕೆಯಲ್ಲಿ ಸಿಕ್ಕುತ್ತದೆ (1:3). "ಸಂತೈಸುವಿಕೆ" ಎಂಬ ಪದವು ಜೊತೆಗೂಡಿದ ಪೌಲನ ಇತರ ಎಲ್ಲಾ ಪತ್ರಿಕೆಗಳಿಂತ ಹೆಚ್ಚಾಗಿ 2 ಕೊರಿಂಥದಲ್ಲಿ ಹಲವು ಬಾರಿ ಕಾಣಿಸಿಕೊಂಡಿದೆ. 1:3-8ರಲ್ಲಿ, ಈ ಪದವು ಹತ್ತಕ್ಕಿಂತಲೂ ಹೆಚ್ಚುಬಾರಿ ಕಾಣಿಸಿಕೊಂಡಿದೆ. ದಿವ್ಯ ಸಂತೈಸುವಿಕೆಯ ಬಗೆಗೆ ಅನೇಕ ಬಾರಿ ಒಂದೇ ಪತ್ರದಲ್ಲಿ ಕ್ರಿಸ್ತನಿಗಾಗಿನ ಪೌಲನ ಸಂಕಟದ ಬಗೆಗೆ ಆತನು ಹೆಚ್ಚು ವಿವರವಾಗಿ ಮಾತನಾಡಿದ್ದು ಇದು

ಆಕಸ್ಮಿಕವಲ್ಲ. ಯಾಕೆಂದರೆ "ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ" (1:4) ಎಂದು ಪೌಲನು ಸಂಕಟವನ್ನು ವಿರೋಧಿಸಬಹುದಿತ್ತು, ಆತನ ಹೊರೆಗಳು ಎಂದಿಗೂ ಒಂಟಿಯಾಗಿ ಹೊರಲ್ಪಡಲಿಲ್ಲ.

"ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ" ಇದು ಬೈಬಲಿನ ಪುರಾತನ ಸಂತೈಸುವಿಕೆಯಾಗಿದೆ. ನೋವಿನ ಅನುಪಸ್ಥಿತಿಯಲ್ಲಿ ನಂಬಿಕೆಯು ಒಳಗೊಂಡಿದೆ ಎಂದು ಬೈಬಲ್ ಎಂದಿಗೂ ಸೂಚಿಸುವುದಿಲ್ಲ. ಪೌಲನು ಕ್ರೈಸ್ತನಾದಾಗ ಕರ್ತನು ಅನನೀಯನಿಗೆ, "ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆಯನ್ನು ಅನುಭವಿಸಬೇಕೆಂಬುದನ್ನು ನಾನೇ ಅವನಿಗೆ ತೋರಿಸುವೆನು" (ಅಪೊಸ್ತಲ ಕೃತ್ಯಗಳು 9:16) ಎಂದು ಹೇಳುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ, ದೇವರ ಅನುಪಸ್ಥಿತಿಯಲ್ಲಿ ಅಥವಾ ಬಚ್ಚಿಟ್ಟುಕೊಳ್ಳುವಿಕೆಯಲ್ಲಿ ದೇವಜನರಿಗೆ ಭಯವನ್ನು ಉಂಟುಮಾಡಿದ ಹಾಳಾಗುವ ಅನುಭವವನ್ನು ಹೊಂದಿದರು. ಇಸ್ರಾಯೇಲು ಸೋಲಿಸಲ್ಪಟ್ಟ ಕ್ಷಣದಲ್ಲಿ, ಮತ್ತು ಆಕೆಯ ಪಟ್ಟಣಗಳು ಹಾಳಾಗುವುದಕ್ಕೆ ಉಳಿದ ಸಂದರ್ಭದಲ್ಲಿ "ಆಕೆಯನ್ನು ... ಯಾರೂ ಸಂತೈಸರು ... ಸಂತೈಸುವವರೇ ಇಲ್ಲ" (ಪ್ರಲಾಪ 1:2, 9) ಎಂದಿದೆ. ಅವಳು "ಈ ವಿಪತ್ತುಗಳಿಂದ ಅಳುವೆನು, ನನ್ನನ್ನು ಸಂತೈಸಿ ದಣಿವಾರಿಸತಕ್ಕನು ದೂರವಾಗಿರುವುದರಿಂದ ನನ್ನ ಕಣ್ಣೀರು ಧಾರೆಧಾರೆಯಾಗಿ ಹರಿಯುವದು ಶತ್ರುವು ಗೆದ್ದ ನನ್ನ ಮಕ್ಕಳು ಹಾಳಾದರು" (ಪ್ರಲಾಪ 1:16). ಎಂದು ಹೇಳುವಳು.

ದುಃಖದ ಸಂದರ್ಭದಲ್ಲಿ ದೇವರು ಮಾತ್ರ ಸಮಾಧಾನವನ್ನು ತರಬಲ್ಲನು. ಕೀರ್ತನಗಾರನು ಹೇಳುವಂತೆ, "ನಿನ್ನ ದೊಣ್ಣೆಯೂ ನನ್ನ ಕೋಲೂ ನನಗೆ ಧೈರ್ಯವನ್ನು ಕೊಡುತ್ತವೆ" (ಕೀರ್ತನೆ 23:4). ವೇದಭಾಗದ ಒಂದು ಬಲುಸುಂದರವಾದ ಪರಿಚ್ಛೇದವೆಂದರೆ ದೇವರು ತನ್ನ ದಾರಿತಪ್ಪಿದ ಮಕ್ಕಳಿಗೆ "ನನ್ನ ಜನರನ್ನು ಸಂತೈಸಿ, ಸಂತೈಸಿರಿ, ಸಂತೈಸಿರಿ; ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾಡಿರಿ; ಅದಕ್ಕೆ ಗಡು ತೀರಿತು. ಅದರ ಪಾಪಗಳಿಗೂ ಯೆಹೋವನ ಕೈಯಿಂದ ಎರಡಷ್ಟು ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ" (ಯೆಶಾಯ 40:1, 2).

ಯೆಶಾಯನು ದಾರಿತಪ್ಪಿದ ಜನರನ್ನು ಸಮೀಕ್ಷಿಸುವಾಗ, "ದುಃಖಿತರೆಲ್ಲರನ್ನು ಸಂತೈಸುವು" ದಕ್ಕೆ ಬರುವ ದಿನವನ್ನು ಆತನು ಎದುರುನೋಡುವವನಾಗಿದ್ದಾನೆ (ಯೆಶಾಯ 61:2). ಪೌಲನು ದೇವರನ್ನು "ಸಂತೈಸುವ ದೇವರು" ಎಂದು ವರ್ಣಿಸಿದ್ದು, ಆತನ ಜನರ ಇತಿಹಾಸವನ್ನು ಆತನು ನೆನಪಿಸುವವನಾಗಿದ್ದಾನೆ. ದೇವರು ಬಾಧೆಯಿಂದ ತಪ್ಪಿಸಲಾರನು, ಆದರೆ ಆತನು ಸಂತೈಸುವ ದೇವರಾಗಿ ಇರುವವನಾಗಿದ್ದಾನೆ.

ಪೌಲನ ವಿವರಣೆಯಲ್ಲಿ ಇರುವಂತ ದೇವರು "ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸು" ವವನಂತೆ ಇರುತ್ತಾನೆ ಎಂಬ ವಿಜಯದ ಆತ್ಮವನ್ನು ನಾವು ಕಳೆದು ಕೊಳ್ಳಬಹುದಾದ ಕಾರಣ "ಸಂತೈಸುವಿಕೆ" ಎಂಬ ಪದವು ಬಲು ಬಲಹೀನವಾದದ್ದು ಮತ್ತು ಅಗ್ಗವಾದದ್ದು ಆಗಬಹುದಾಗಿದೆ. ದುಃಖಪಡುವವನನ್ನು ಸಮಾಧಾನಮಾಡಲು ಹೇಳಲು ಪ್ರಯತ್ನಿಸುವ ಹೇಳುವ ನಮ್ಮ ಪದಗಳನ್ನು ಸಂತೈಸುವಿಕೆಯು ಸೂಚಿಸುವುದಾಗಿದೆ. ನಾವು "ಸರ್ವಾನುಕೂಲವಾದ ಆದಾಯ" ಮತ್ತು "ಸರ್ವಾನುಕೂಲವಾದ ಮನೆಯ" ಬಗೆಗೆ ಸಹ ಮಾತನಾಡುವವರಾಗಿದ್ದೇವೆ. ಬೈಬಲಿನಲ್ಲಿ "ಸಂತೈಸುವಿಕೆಯು" ಆ ಕರುಣೆ ಶಬ್ಧಕ್ಕೆ ಅಥವಾ ನಿರ್ಧಿಷ್ಟವಾದ ಶಾಂತತೆಗೆ ಬಲು ದೂರವಾಗಿದೆ. ದೇವರ ಸಂತೈಸುವಿಕೆಯು ಬಲಪಡಿಸುವಿಕೆಯಲ್ಲಿ ಮತ್ತು ರಕ್ಷಿಸುವಲ್ಲಿನ ಆತನ ಶಕ್ತಿಯಾಗಿದೆ.

"ಕುಗ್ಗಿದವಳೇ ಗಾಳಿಯ ಬಡಿತಕ್ಕೆ ಗುರಿಯಾದವಳೇ, ಯಾರೂ ಸಂತೈಸದವಳೇ ..." (ಯೆಶಾಯ 54:11) ಎಂಬ ಮಾತುಗಳು ಪ್ರವಾದಿಯು ಹತಾಶರಾದ ಜನರನ್ನು ಉದ್ದೇಶಿಸಿ ಮಾನಾಡುವ ಮಾತಿನ ಈ ಅರ್ಥವು ಸೂಚಿಸುವುದಾಗಿದೆ. ನಂತರ ಆತನು "ಅವರನ್ನು ... ನಡೆಸುತ್ತಾ ... ಆದರಣೆಯನ್ನೂ ಪ್ರತಿಫಲವಾಗಿ ಕೊಡುವೆನು" (ಯೆಶಾಯ 57:18) ಅದನ್ನು

ಎಂದು ಹೇಳುತ್ತಾನೆ. ದೇವರ ಸಮಾಧಾನ ಪಡಿಸುವಿಕೆಯು ಆತನ ಬಿಡುಗಡೆಯ ಮತ್ತು ವಾಸಿಮಾಡುವ ಶಕ್ತಿಯಲ್ಲಿ ಅಡಗಿದೆ.

## ಸ್ಪಟವಾದ ನೆನಪು (1:8-11)

ದೇವರು ತನ್ನ ಸಹಾಯಕನಾಗಿ ಬಂದ ಸ್ಪುಟವಾದ ಸ್ಮೃತಿ ಪೌಲನಿಗಿತ್ತು. ಇದನ್ನಿ ಆತನು ಆಸ್ಯದಲ್ಲಿ ಅನುಭವಿಸಿದ ಸಂಕಟದಲ್ಲಿ ಇದ್ದುದಾಗಿತ್ತು (1:8). ಆತನು "ಬಲವನ್ನು ಮೀರಿದಂತಹ ಅತ್ಯಧಿಕವಾದ ಭಾರವನ್ನು ಹೊಂದಿದ್ದನು" ಮತ್ತು "ಜೀವವುಳಿಯುವ ಮಾರ್ಗವನ್ನೂ ಕಾಣದವನಾಗಿದ್ದನು." ಈ ಉದಾಹರಣೆಗಳು ಆತ್ಯದಿಕವಾದ ಭಾರವನ್ನು ಹೇರಿಕೊಂಡ ವಾಣಿಜ್ಯ ನೌಕೆಯನ್ನು ಸೂಚಿಸುವವುಗಳು ಆಗಿವೆ. ಆತನ ನೆನಪಿಸುವಿಕೆಯು ತನ್ನ ಸಂದಿಗ್ಧತೆಯನ್ನು ಬಿಟ್ಟು ಹೊರಗೆ ಆತನು ಏನನ್ನೂ ಪರಿಗಣಿಸದೇ ಇರುವದಾಗಿದುದ "ನಿರುತ್ಸಾಹವನ್ನು" ಸೂಚಿಸುವಾಗಿದೆ. ತನ್ನ ಸ್ವಂತ ಬಲದ ಮೇಲೆ, ಯಾವುದೇ ಪರಿಹಾರವು ಸಿಕ್ಕದು. ಆತನು ಸೇವೆಯ ಎಲ್ಲಾ ಭಾರಗಳು ಆತನು ಹೊತ್ತುಕೊಳ್ಳುವ ಸಾಮರ್ಥ್ಯವನ್ನು ಮೀರಿದ್ದಾಗಿದ್ದವು. "ರೋಗಗಳಲ್ಲಿಯೂ, ಬಾಧೆಗಳಲ್ಲಿಯೂ, ಸಭೆಯ ವಿಚಾರವಾಗಿ ಚಿಂತೆಮಾಡುವಲ್ಲಿಯೂ" (ಹೋಲಿಸಿ 5:4; 11:28). ಹೀಗೆ ಆತನು ಸೇವೆಯ ವಿಪತ್ಕಾಲದ ಬಗೆಗೆ ಭೌತಿಕ ಮತ್ತು ಭಾವನಾತ್ಮಕ ಎರಡು ಮನಸ್ಸನ್ನು ಹೊಂದಿದ್ದನು. ಆತನುಭಾರವನ್ನು ಹೊತ್ತುಕೊಳ್ಳದೆ ಬೇರೆ ಮಾರ್ಗಗಳೇ ಇರಲಿಲ್ಲ. ಅದು ಆತನನ್ನು ಹಿಂಡುವದು ನಿಶ್ಚಿತವಾಗಿತ್ತು.

"ಎಲ್ಲಾ ಸಂಟಗಳಲ್ಲಿ ಆತನು ನಮ್ಮನ್ನು ಸಂತೈಸುವವನು ಆಗಿದ್ದಾನೆ" (1:4) ಎಂಬ ಈ ಅನುಭವವು ದೇವರ ಯಥಾವತ್ತಾದ ರೂಪವನ್ನು ವರ್ಣಿಸುವತ್ತ ಪೌಲನನ್ನು ನಡೆಸಿತು. ದೇವರ ಪ್ರಸನ್ನತೆಯಲ್ಲಿ ಬಲಪಡಿಸುವಿಕೆಯನ್ನು ಪರಿಗಣಿಸುವುದರಲ್ಲಿ ಹಿಂದೆಯೇ ಪೌಲನ ವಿಫಲನಾಗಿದ್ದನು. ಆದರೆ ಈ "ನಿರಾಶೆಯ" ಸಮಯದಲ್ಲಿ ಪೌಲನು, ತನ್ನ ಶಕ್ತಿಯ ಮೇಲಲ್ಲ, ದೇವರ ಪುನರುತ್ಥಾನದ ಶಕ್ತಿಯ ಮೇಲೆ ಆತುಕೊಳ್ಳುವುದನ್ನು ಕಲಿತನು (1:9). ದೇವರ ಸಮಾಧಾನವು ಕೇವಲ ಕರುಣೆಯ ಪದಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಇದು ಅಪಾಯಕರವಾದ ಆಪತ್ತಿನಿಂದ ಆತನನ್ನು ಬಿಡಿಸುವಂಥ ಮತ್ತು ಆತನ ಸೇವೆಯನ್ನು ಮುಂದುವರೆಸಲು ಆತನಿಗೆ ಬಲವನ್ನು ಕೊಡುವಂಥ ಶಕ್ತಿಯಾಗಿತ್ತು. ಆ ಕ್ಷಣದಿಂದಲೇ "ಆತನು ಇನ್ನು ಮೇಲೆಯೂ ತಪ್ಪಿಸುವವನಾಗಿದ್ದಾನೆ" ಎಂದು ಪೌಲನು ಕಂಡುಕೊಂಡನು (1:10).

ದೇವರಿಗೋಸ್ಕರ ಅನೇಕ ಸಮಸ್ಯೆಗಳಿಗೆ ನಮ್ಮನ್ನು ನಾವು ತೆರೆದುಕೊಳ್ಳುವದಕ್ಕೆ ಅಧಿಕೃತ ಕ್ರೈಸ್ತತ್ವವು ಒಳಗೊಂಡಿದೆ ಆದರೆ ಪೌಲನು ನಮ್ಮನ್ನು ಜ್ಞಾಪಿಸುವಂತೆ ನಾವು ನಮ್ಮ ಮೇಲೆಜ್ವಾತುಕೊಳ್ಳಲಾರೆವು. "ಅತಿಯಾದ ಭಾರದಿಂದ" ನಾವಿದ್ದೇವೆ ಎಂದು ನಾವು ನಂಬಿರುವಾಗ ನಮ್ಮ ಬಳಿಗೆ ಬರುವವನ ಬಗೆಗೆ ನಮ್ಮ ನಂಬಿಕೆಯು ಹೇಳುವುದಾಗಿದೆ. ನಂತರದಲ್ಲಿ ಪೌಲನು ಹೇಳುವಂತೆ, "... ನಾನು ಯಾವಾಗ ನಿರ್ಬಲನಾಗಿದ್ದೇನೋ ಅವಾ ಗಲೇ ಬಲವುಳ್ಳವನಾಗಿದ್ದೇನೆ" (12:10).

"ಎಲ್ಲಾ ಸಂಕಟಗಳಲ್ಲಿ ಆತನು ನಮ್ಮನ್ನು ಸಂತೈಸುವವನು ಆಗಿದ್ದಾನೆ" ಎಂದು ಪೌಲನು ಹೊಂದಿದ ನಂಬಿಕೆಯಲ್ಲಿ ಅಪನಂಬಿಗಸ್ತರಾಗಿರುವ ಕಾರಣ ಹಲವು ಬಾರಿ ನಮ್ಮ ಸೇವೆ ಗಳು ವಿಫಲವಾಗುತ್ತವೆ. ಕೆಲ ಉದಾಹರಣೆಗಳಲ್ಲಿ, ನಾವು ನಮ್ಮ ಸೇವೆಗಳನ್ನು ದೇವರ ಸಂತೈಸುವಿಕೆಯ ಶಕ್ತಿಗೆ ಸ್ಥಳವನ್ನು ಬಿಡದೇ ನಮ್ಮದೇ ಆದ ಸಂಪನ್ಮೂಲಗಳ ಮತ್ತು ನಮ್ಮ ಚಾತುರ್ಯದ ಮೇಲೆ ನಡೆಸುವವರಾಗಿರುತ್ತೇವೆ. ಅಧಿಕೃತ ಸೇವೆಯು ಬಾಧೆಗಳು ಮತ್ತು ದಿವ್ಯ ಸಂತೈಸುವಿಕೆ ಈ ಎರಡರ ಅನುಭವವಾಗಿದೆ. ಎರಡರಲ್ಲಿ ಒಂದರ ಅನುಪಸ್ಥಿತಿಯು ನಮ್ಮ ಕೆಲಸವನ್ನು ಪರಿಣಾರಹಿತವಾಗಿಸುತ್ತವೆ.

## ಇತರರೊಂದಿಗೆ ಸಂತೈಸುವಿಕೆಯನ್ನು ಹಂಚಿಕೊಳ್ಳುವದು (1:4-7)

ದೇವರ ಸಂತೈಸುವಿಕೆಯು ಅನೇಕ ರೀತಿಯಲ್ಲಿ ಬರುವದು. ಪೌಲನನ್ನು ಆತನ ನಿರಾಶ್ಮಕತೆಯಿಂದ ಬಿಡಿಸಲು ಇದು ಬಂದಿತು. ಆದರೆ ದೇವರ ಸಂತೈಸುವಿಕೆಯು ಜನರ ಮೂಲಕವೂ ಸಹ ಬರುವುದಾಗಿದೆ. ವಾಸ್ತವವಾಗಿ, 2 ಕೊರಿಂಥ ಪತ್ರಿಕೆಯು ತೆರೆಯುತ್ತಿದ್ದಂತೆಯೇ (1:3-7) ಪೌಲನು ದೇವರ ಸಂತೈಸುವಿಕೆಯ ಸಾನಿಧ್ಯದ ನಿಯೋಗಿಯಾಗಿರುವುದು ಆತನ ಮುಖ್ಯ ಸಂಗತಿಯಾಗಿದೆ. "ಹೀಗೆ ದೇವರಿಂದ ನಮಗಾಗುವ ಆದರಣೆಯ ಮೂಲಕ ನಾವು ನಾನಾ ವಿಧವಾದ ಸಂಕಟಗಳಲ್ಲಿ ಬಿದ್ದಿಗಳಲ್ಲಿ ಸಂತೈಸುವುದಕ್ಕೆ ಶಕ್ತರಾಗುತ್ತೇವೆ" (1:4). ಎನ್ನುವಲ್ಲಿ ಇತರರನ್ನು ಸಂತೈಸುವ ಉದ್ದೇಶದಿಂದಲೇ ಆತನು ದೇವರಿಂದ ಸಂತೈಸಲ್ಪಟ್ಟನು. ತಾನೊಬ್ಬನೇ ಮಾತ್ರ ನಿರುತ್ಸಾಕ್ಕೊಳಗಾದವನು ಅಲ್ಲ ಇತರರೂ ಕೂಡ ಆತನು ಅನುಭವಿಸಿದಂತಹ ಭಾವನಾತ್ಮಕ, ಧೈಹಿಕ ಮತ್ತು ಆತ್ಮೀಕವಾದ ಸಂಕಷ್ಟಗಳಂಥ "ಭಾಧೆಗಳನ್ನು" (1:6) ಹೊಂದಿದ್ದರು ಎಂಬುದನ್ನು ಆತನು ಬಲ್ಲವನಾಗಿದ್ದನು. ಆತನು ದೇವರಿಂದ ಪಡೆದುಕೊಂಡ ಬಲವನ್ನು ಹಂಚಿಕೊಳ್ಳುವುದರ ಮೂಲಕ ನಿಶ್ಚಿತವಾಗಿ ಇತರರೂ ಕೂಡ ಅದರ ಲಾಭವನ್ನು ಪಡೆಬಹುದು. ಈಗಾಗಲೇ ಸಂತೈಸುವಿಕೆಯನ್ನು ಪಡೆದ ವ್ಯಕ್ತಿಯು ಇದ್ದಾಗ ಆತನ ಮೇಲೆ ತಮ್ಮದನ್ನು ಹಾಕಿ ಅವರು ತಮ್ಮ ಸ್ವಂತದ ಕಷ್ಟಗಳನ್ನು ಸಹಿಸಿಕೊಳ್ಳುವುದಕ್ಕೆ ಸರಳವಾದ ಮಾರ್ಗವನ್ನು ಕಂಡುಕೊಳ್ಳುವರು.

ತನ್ನ ಪ್ರಚಲಿತ ಕಷ್ಟಗಳಿಗೆ ದೇವರು ಉದ್ದೇಶವನ್ನು ಹೊಂದಿದ್ದಾನೆ ಎಂದು ಪೌಲನು ತಿಳಿದಿದ್ದನು. ಆತನು ತಾನು ಪಡಕೊಂಡ ಸಂತೈಸುವಿಕೆಯಿಂದ ಆತನು ಇತರರನ್ನು ಸಂತೈಸುತ್ತಿದ್ದಾನೆ (1:4). 1:5ರಲ್ಲಿ, ಆಘಾತಕರವಾದ ಅನುಭವದಲ್ಲಿ, ಕ್ರಿಸ್ತನ ಬಾಧೆಗಳು ಮತ್ತು ಆತನ ಸಂತೈಸುವಿಕೆಯೆರಡನ್ನೂ ಪೌಲನ ಮಿತಿಮೀರಿ ವರ್ಣಿಸಿದ್ದಾನೆ. "ಯಾರೊಬ್ಬ ಮನುಷ್ಯನು ದ್ವೀಪವಾಗಿರಲಾರನೂ" ಅಲ್ಲಿ ಚರ್ಚ ಒಂದು ಸಮುದಾಯವಾಗಿದೆ ಎಂದು ಮಿತಿಮೀರುವಿಕೆಯ ಉದಾಹರಣೆಯು ಸೂಚಿಸುವುದಾಗಿದೆ. ನಮ್ಮ ಬಾಧೆಗಳು ಅದೇ ಒಂದಕ್ಕಿಂತ ತುಂಬಿತುಳುಕುತ್ತವೆ. ಸಂತೈಸುವಿಕೆಯಲ್ಲಿ "ಹಂಚಿಕೊಳ್ಳುವಿಕೆ" (1:7) ಮತ್ತು "ಮಿತಿಮೀರುವಿಕೆಗಳು" ಅದೇ ರೀತಿಯಲ್ಲಿವೆ. ನಾವು ನಮ್ಮ ಭಾರಗಳೊಂದಿಗೆ ಒಬ್ಬಂಟಿಗರಾಗಿ ನಿಂತಾಗ, ನಾವು ಸುಲಭವಾಗಿ ಹಿಂಡಲ್ಪಡುವುದಕ್ಕೆ ಒಳಗಾಗುತ್ತೇವೆ. ಆದರೆ ನಾವು ಬಲವನ್ನು ಹೊಂದುತ್ತೇವೆ.

ನಾವು ನಮ್ಮ ಸ್ವಂತ ಜೀವಿತದ ನಿರಾಶೆಯ ಮತ್ತು ಸಂಕಟಗಳ ಅನುಭವಗಳಿಗೆ ಅನುವುಮಾಡಿಕೊಟ್ಟ ನಮ್ಮ ಮನಸ್ಸನ್ನು ಬೇರೆ ಸಂಗತಿಗಳಲ್ಲಿ ಮಗ್ನಗೊಳಿಸಿದ್ದಾದರೆ ನಮ್ಮ ಸೇವೆಯು ವಿಫಲವಾಗುತ್ತದೆ. ಒಂದು ವೇಳೆ ನಾವು ಪೌಲನಂತೆ ಇರುವುದಾದರೆ, ದೇವರ ಶಕ್ತಿಯನ್ನು ಬಲಹೀನತೆಯ ಸಮಯದಲ್ಲಿಯೇ ಕಂಡುಕೊಂಡಿದ್ದಾದರೆ, ಈ ವಾರ್ತೆಯು ಹಂಚಲ್ಪಡಬೇಕು. ನಮ್ಮನ್ನು ನಾವು "ಜಜ್ಜಲ್ಪಟ್ಟವರು" ಎಂದು ನೋಡಿಕೊಂಡಿದ್ದಾದರೆ, ತಾವು ದೇವರಿಂದ ಸಂತೈಸುವಿಕೆಯನ್ನು ಪಡೆದುಕೊಂಡು ಅದನ್ನು ನಮ್ಮೊಡನೆ ಹಂಚಿಕೊಳ್ಳುವವರ ಅವಶ್ಯಕತೆಯು ನಮಗಿದೆ. ಒಬ್ಬನ ಭಾರವ ಅಂತಿಮವಾಗಿ ಇಡೀ ಸಮುದಾಯದ ಉದ್ದೇಶಕ್ಕೆ ಉಪಯುಕ್ತವಾಗಿ ಪರಿಣಮಿಸಬಹುದು. "ನಮಗೆ ಸಂಟ ಬರುತ್ತದೋ ಅದರಿಂದ ನಿಮಗೆ ಧೈರ್ಯವೂ ರಕ್ಷಣೆಯೂ ಉಂಟಾಗುತ್ತದೆ" (1:6).

## ಇನ್ನೊಂದು ವೈಯಕ್ತಿಕ ಅನುಭವ (7:5-16)

ಪೌಲನು ಕೇವಲ ಸಂತೈಸುವಿಕೆಯ ಮೂಲನಾಗಿರಲಿಲ್ಲ; ಕೆಲಸಾರಿ ಇತರ ಕ್ರೈಸ್ತರ ಮಾತ್ರ ಒದಗಿಸಬಹುದಾದ ಸಂತೈಸುವಿಕೆಯ ಅವಶ್ಯಕತೆಯು ಆತನಿಗಿತ್ತು. ಒಂದು ಸಮಯದಲ್ಲಿ ಆತನು "ಎಲ್ಲಾ ವಿಷಯಗಳಲ್ಲಿ ನಮಗೆ ಸಂಕಟವಿತ್ತು; ಹೊರಗೆಕಲಹ, ಒಳಗೆ ಭಯ" (7:5) ಎಂಬ ಸ್ಥಿತಿಯಲ್ಲಿದ್ದನು. ತೊಂದರೆದಾಯಕವಾದ ಸಭೆಗಳ ಪರಿಸ್ಥಿತಿಯು ನಿದ್ರೆಯಿಲ್ಲದ

ರಾತ್ರಿಗಳನ್ನು ಮತ್ತು ಮಾನಸಿಕ ಖಿನ್ನತೆಯತ್ತ ನಡೆಸುವತ್ತ ಆತನನ್ನು ಬಿಟ್ಟಿತು: "ನನ್ನ ಸಹೋದರನಾದ ತೀತನು ನನಗೆ ಸಿಕ್ಕಲಿಲ್ಲವಾದ ಕಾರಣ ನನ್ನ ಆತ್ಮಕ್ಕೆ ಉಪಶಮನವಿಲ್ಲದಾಯಿತು" (2:13). ತೊಂದರೆದಾಯಕವಾದ ಸಭೆಗಳು ಪೌಲನನ್ನು ಬಳಲಿಸಿಬಿಟ್ಟವು. ಅತೃಪ್ತರು ಮತ್ತು ಬಂಡೆದ್ದವರು ಇದರ ಇತಿಹಾಸವು ಆತನ ಕೆಲಸಗಾರರ ಫಲವು ನಿರರ್ಥಕ ಎಂದು ಕಾಣಿಸುವಂತೆ ಮಾಡುವುದೇ ಆಗಿತ್ತು.

ಸಭೆಯ ತೊಂದರೆಗಳು ಹೊಸದಾದವುಗಳೇನಲ್ಲ. ಪೌಲನ ಸ್ವಂತ ಹೋರಾಟದ ಹಿಂದೆ ಕೊರಿಂಥದಲ್ಲಿನ ಪ್ರಕಟವಾದ ಎದುರುಬೀಳುವಿಕೆಯು ಆತನನ್ನು ಗುರುತರವಾದ ದುಃಖಕ್ಕೆ ತಂದಿತು (2:5). ಕೊರಿಂಥದಲ್ಲಿನ ಹಠಮಾರಿ ಸಮಸ್ಯೆಗಳು ಆತನನ್ನು ಬಿಟ್ಟುಹೋದರೂ ಆತನು ಅದನ್ನು ಬಿಟ್ಟುಬಿಡುವವನಾಗಿರಲಿಲ್ಲ.

ತೀತನಿಂದ ಬಂದ ಸುದ್ದಿಯು ಆತನ ಅಪರಿಮಿತವಾದ ಸಂತೋಷದ ಮೂಲವಾಗಿತ್ತು. ಕೊರಿಂಥದವರು ಪಶ್ಚಾತ್ತಾಪದಲ್ಲಿ ಗೋಳಾಡುತ್ತಿದ್ದರು (7:9). ಅವರು ಗೋಳಾಟವು ನಂಬಿಕೆಯಲ್ಲಿನ ವೈಶಮ್ಯ ಮತ್ತು ಪರಿತ್ಯಾಗದ ಪರಿಣಾಮವಾಗಿರಲಿಲ್ಲ ಇದು "ದೈವಿಕ ದುಃಖ" (7:10). ದತ್ತ ನಡೆಸುವವು ಎಂಬುದು ಪೌಲನ ವಿರಳವಾದ ಮನವರಿಕೆಯನ್ನು ನೆನಪಿಸುವವುಗಳು ಆಗಿವೆ. ಅತಿಯಾದ ತೊಂದರೆಯ ಮೂಲವಾಗಿರುವವರು ಸಹ ಬದಲಾಗಬಹುದು.

ತೀತನ ಬರುವಿಕೆಯ ಸುದ್ದಿಯು ಪೌಲನನ್ನು ಸಂತೈಸುವ ಮೂಲವಾಗಿತ್ತು: "ಆದರೆ ದೀನಾವಸ್ಥೆಯಲ್ಲಿರುವವರನ್ನು ಸಂತೈಸುವ ದೇವರು ತೀತನ ಬರುವಿಕೆಯಿಂದ ನಮ್ಮನ್ನು ಸಂತೈಸಿದನು" (7:6). ಈ ಘಟನೆಯು ದೇವರ ಮಕ್ಕಳೂ ಒಬ್ಬರನೊಬ್ಬರು ಸಂತೈಸುವದರಲ್ಲಿ ಮಧ್ಯಪ್ರವೇಶಿಸುವದು ಈ ರೀತಿಯಲ್ಲಿ ಒಂದು ಉದಾಹರಣೆಯಾಗಿದೆ. ಕೊರಿಂಥದವರ ಬದಲಾದ ಹೃದಯದಿಂದ ಸಂತೈಸುವಿಕೆಯನ್ನು ತೀತನು ಸಮಾಧಾನವನ್ನು ಹೊಂದಿದಾಗ ಪೌಲನು ಸಂತೈಸುವಿಕೆಯನ್ನು ಹೊಂದಿದನು. ಪೌಲನನ್ನು ಸಂತೈಸಲು ಸಮರ್ಥನಾದ ತೀತನನ್ನು ಸಂತೈಸಲು ಕೊರಿಂಥಿಯನ್ನರು ಸಮರ್ಥರಾಗಿದ್ದರು. ಆ ಪರಿಚ್ಛೇದವು ಸಮಾಧಾನ ಮತ್ತು ಸಂತೋಷವನ್ನು ಧ್ವನಿಸುವುದಾಗಿದೆ. ಕ್ರಿಸ್ತೀಯ ಜೀವಿತಕ್ಕಿಂತ ಭಾರವಾದ ಹೊರೆಯು ಅಲ್ಲಿರುವುದಾಗಿದೆ. "ದುಖಪಡಿಸಿತೆಂದು ನಾನು ಮೊದಲು ಪಶ್ಚಾತ್ತಾಪುಡುತ್ತಿದ್ದರೂ" ಕೂಡ ಪೌಲನು "... ಈಗ ಸಂತೋಷಪಡುತ್ತೇನೆ" ಎನ್ನುತ್ತಾನೆ (7:9). ಆತನು ಮನಸ್ಸಿನ ಆದರಣೆಯನ್ನು ಹೊಂದಿದ ತೀತನೊಡನೆ ಸಂತೋಷದಿಂದ ಮಾತನಾಡಿದನು (7:13).

"ಸರ್ವ ವಿಷಯದಲ್ಲೂ ನಿಮ್ಮನ್ನು ಕುರಿತ ನನಗೆ ಭರವಸವಿರುವುದರಿಂದ ಸಂತೋಷಪಡುತ್ತೇನೆ" ಎಂದು ಆತನು ಈ ಭಾಗವನ್ನು ಮಾತುಗಳಿಂದ ನಿರ್ಣಯಿಸುವವನಾಗಿದ್ದಾನೆ (7:16). ತೊಂದರೆದಾಯಕ ಸಭೆಗಳ ಮೇಲಿನ ಸಂಕಟವು ಸಭೆಯ ಜೀವಿತದಲ್ಲಿ ಒಂದರ ನಂತರ ಒಂದರಂತೆ ಬಾಧೆಯುಕ್ತ ಹೋರಾಟವು ಸಭೆಯ ಜೀವಿತದಲ್ಲಿ ಒಳಗೊಂಡಿರುವ ನಿರೀಕ್ಷೆ ರಹಿತ ಭಾವನೆಯುತ್ತ ನಡೆಸುವುದಾಗಿದೆ. ಆದರೆ ಸಭೆಯ ಜೀವಿತವು ಅಪರಿಮಿತವಾದ ವುಗಳನ್ನು ಒಳಗೊಂಡಿರುತ್ತದೆ. ವಾತ್ಸಲ್ಯದ ಬಿಗಿಯುವಿಕೆಯು ಆನಂದ ಮತ್ತು ಸಾಮರ್ಥದ ಸ್ಮರಣೆಗಳನ್ನು ಒದಗಿಸುವುದಾಗಿದೆ. ಈ ಬಿಗಿಯುವಿಕೆಗಳು ಹಲವು ಬಾರಿ ಅಪ್ರಿಯವಾದ ಕ್ಷಣಗಳನ್ನು ಮರೆಯುವುದಕ್ಕೆ ಸಮರ್ಥವಾಗಿರುತ್ತವೆ. ಪೌಲನಿಗಾಗಿ ಇರುವ ಕೊರಿಂಥವರ "ಹಂಬಲ," "ಗೋಳಾಟ" ಮತ್ತು "ಆಸಕ್ತಿಯನ್ನು" ತೀತನು ಒಪ್ಪಿಸಿನು (7:7). ಹಿಂದಿನ ಅಪ್ರಿಯವಾದ ಸಂಗತಿಗಳು ಮರೆಯಲ್ಪಟ್ಟಾಗ, ತಮ್ಮ ಕ್ರಿಸ್ತೀಯ ಒಪ್ಪಿಸಿಕೊಳ್ಳುವಿಕೆಗಳು ಜೊತೆ ಹೋರಾಟಗಾರನಿಂದ ಬಂದಂತಹ ಒಂದು ಬಗೆಯ ಪ್ರೀತಿಯನ್ನು ಹುಟ್ಟಿಸುವವುಗಳಾಗಿದ್ದವುಗಳನ್ನು ಅವರು ಎಂದಿಗೂ ಮರೆಯಲಾರನು. ತೀತನು ಕೂಡಾ ಕೊರಿಂಥಯನ್ನರನ್ನು ಸವಿಸ್ತಾರವಾಗಿ ಬಲ್ಲವನಾಗಿದ್ದು ಅವರ ಜೊತೆ

ಅನ್ಯೋನ್ಯತೆಯ ಹೊಸಸಂಕೋಲೆಯಲ್ಲಿ ಆತನಿದ್ದನು. ಪೌಲನು "ನೀವು ಮನೋಭೀತಿಯಿಂದ ನಡಗುವವರಾಗಿ ಅವನನ್ನು ಸೇರಿಸ್ಕೊಂಡಿದ್ದರಲ್ಲಿ ನಿಮ್ಮೆಲ್ಲರ ವಿಧೇಯತೆಯು ತೋರಿಬಂತು ಅವನು ಅದನ್ನು ಜ್ಞಾಪಕಮಾಡಿಕೊಳ್ಳುವಾಗ ನಿಮ್ಮ ಮೇಲೆ ಅವನ ಕನಿಕರವು ಹೆಚ್ಚಾಗಿದೆ" (7:15) ಎಂದು ಹೇಳುತ್ತಾನೆ.

## ಮುಕ್ತಾಯ

ನನ್ನ ಅನುಭವವು ಹೆಚ್ಚಾಗಿ ಕ್ರಿಯಾಶೀಲ ಕ್ರೈಸ್ತರಂತೆ ಇದ್ದುದಾಗಿದ್ದರೆ, ಕ್ರಿಸ್ತನಿಗಾಗಿನ ಕ್ರಿಯಾತ್ಮಕ ಒಪ್ಪಿಸಿಕೊಳ್ಳುವಿಕೆಗಳು ನಿರಾಕಾರಣೆಯ ಕ್ಷಣದ ದುಗುಡದತ್ತ, ನಾಯಕರುಗಳು ನಿರಂತರವಾಗಿ ಟೀಕೆಯ ವಸ್ತುವಾಗಿದ್ದಾಗ, ಮತ್ತು ಹೊರೆಯು ನಮ್ಮನ್ನು ಜಜ್ಜುವಾಗಿನ ಸಮಯಗಳತ್ತ ನಡೆಸುವವುಗಳಾಗಿರುತ್ತವೆ ಎಂಬ ಸಮಾರೋಪವನ್ನು ನಾವು ಮಾಡಬಹದು. ಇತರ ಕ್ರೈಸ್ತರ ಪ್ರಾಮಾಣಿಕವಾದ ನಿರಾಕಣೆ ಮತ್ತು ಇತರರ ನಿರಾಶೆಯ ಪರಿಣಾಮದ ಜೊತೆಯಲ್ಲಿ ನನ್ನ ಕೆಲಸ ಇವುಗಳನ್ನು ನೆನಪಿಸುವವನಾಗಿರುತ್ತೇನೆ. ಆದರೆ ಜೊತೆ ಕ್ರೈಸ್ತರು ಯಾವಾಗಲೂ ಧೈರ್ಯದ ಮೂಲವಾಗಿರುತ್ತಾರೆ. ಪ್ರೋತ್ಸಾಹಿಸಲು ಪ್ರಯತ್ನಿಸಿದವುಗಳಲ್ಲಿ ಕೆಲವುಗಳು ಅಂತಿಮವಾಗಿ ನಮ್ಮ ಪ್ರೋತ್ಸಾಹಿಸುತ್ತವೆ! ಪೌಲನು ತೀತನ ಬರುವಿಕೆಯಲ್ಲಿ ದೇವರ ಸಂತೈಸುವಿಕೆಯನ್ನು ನೋಡಬಹುದಾದ ಹಾಗೆ ನಿಸ್ಸಂಶಯವಾಗಿ ನಾವುಗಳೂ ನಮಗಾಗಿ ಸುವಾರ್ತೆಯನ್ನು ತರುವ ಕಾರ್ಯಗಳಲ್ಲಿ ದೇವರನ್ನು ನೋಡಬಹುದಾಗಿದೆ.

ದೇವರು ನಮ್ಮ ಸೇವೆಯಲ್ಲಿನ ಸಂಕಟವನ್ನು ತೆಗೆದುಹಾಕಲು ಶಮನದಾಯಕನನ್ನು ಕೊಡುವುದಿಲ್ಲ, ಆದರೆ ಅನೇಕ ವಿಧದಲ್ಲಿ ಸಂತೈಸುವಿಕೆಯನ್ನು ಕಳುಹಿಸುವವನಾಗಿದ್ದಾನೆ. ಆತನು ಅದನ್ನು ಒಳ್ಳೆಯ ಸ್ನೇಹಿತರ, ಸುವಾರ್ತೆಯ ಮೂಲಕ, ನಿರಾಶೆಯಲ್ಲಿ ಇರುವುದರಿಂದ ನಮ್ಮನ್ನು ತಪ್ಪಿಸುವ ಬಲದ ಮೂಲಕ ಆತನು ಕಳಿಸುವವನಾಗಿದ್ದಾನೆ.